ದಿನಾಂಕಃ 20-01-2026 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಲ್. ಕೆ. ವಕೀಲರಿಂದ

1. ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಬೆಂಗಳೂರಿನಲ್ಲಿ ಒಂದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆನು. ಈಗ್ಗೆ 2 ವರ್ಷಗಳಿಂದ ನಾನು ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಬೆಂಗಳೂರಿನ ಕಂಪನಿಯಲ್ಲಿ ನಾನು ಸುಮಾರು 4 ವರ್ಷ ಕೆಲಸ ಮಾಡಿದ್ದೆನು. ನಾನು ವರ್ಷಕ್ಕೆ ಸುಮಾರು 2 ಲಕ್ಷ ರೂಪಾಯಿಗಳವರೆಗೆ ದುಡಿಮೆ ಮಾಡುತ್ತೇನೆ. ಆರೋಪಿ ನನ್ನ ದೂರದ ಸಂಬಂಧಿ ಇರುತ್ತಾರೆ. ಆರೋಪಿಯ ಮನೆಯಲ್ಲಿ ಆರೋಪಿ ಆತನ ಹೆಂಡತಿ, ತಂದೆ ಹಾಗೂ ತಾಯಿ ಇರುತ್ತಾರೆ. ಆರೋಪಿಯ ತಂದೆಯ ಹೆಸರು ಸುರೇಶ್ ಬಾಬು ಇರುತ್ತದೆ. ಆರೋಪಿಯ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಆರೋಪಿಯ ಹೆಂಡತಿಯ ಹೆಸರು ಸಹ ನನಗೆ ಗೊತ್ತಿಲ್ಲ.

2. ಆರೋಪಿಗೆ ನಾನು ನನ್ನ ಮನೆಯಲ್ಲಿ ಹಣ ನೀಡಿದ್ದೆನು. ಆ ರೀತಿ ನಾನು ಆರೋಪಿಗೆ ನಗದು ರೂಪದಲ್ಲಿ 5 ಲಕ್ಷ ರೂಪಾಯಿಗಳನ್ನು ನೀಡಿದ್ದೆನು. ನಾನು ಆರೋಪಿಗೆ ಹಣ ನೀಡಿದಾಗ ಅವರೊಂದಿಗೆ ಬೇರೆ ಯಾರೂ ಸಹ ಬಂದಿರಲಿಲ್ಲ. ಆರೋಪಿ ಕಟಿಂಗ್ ಶಾಪ್ ನಡೆಸುತ್ತಿದ್ದಾರೆ. ಆರೋಪಿಗೆ ವರ್ಷಕ್ಕೆ ಸುಮಾರು 2 ಲಕ್ಷ ರೂಪಾಯಿಗಳವರೆಗೆ ಆದಾಯ ಇರುತ್ತದೆ.

3. ಆರೋಪಿಗೆ ನೋಟೀಸು ನೀಡಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಆರೋಪಿ ನನ್ನಿಂದ ಹಣ ಪಡೆದ ದಿನದಂದೇ ಚೆಕ್ಕನ್ನು ನೀಡಿರುತ್ತಾರೆ. ಆರೋಪಿ ನನ್ನಿಂದ ಹಣ ಪಡೆದು ಅದನ್ನು 3 ತಿಂಗಳ ಒಳಗೆ ಮರುಪಾವತಿ ಮಾಡುವುದಾಗಿ ಹೇಳಿದ್ದರು. ನಗದೀಕರಣಕ್ಕಾಗಿ ಚೆಕ್ಕನ್ನು ಯಾವ ದಿನಾಂಕದಂದು ಬ್ಯಾಂಕಿಗೆ ಹಾಜರು ಪಡಿಸಿದ್ದೆನು ಎಂಬುದು ನನಗೆ ನೆನಪಿಲ್ಲ. ಈ ವ್ಯವಹಾರವನ್ನು ಹೊರತು ಪಡಿಸಿ ನನ್ನ ಹಾಗೂ ಆರೋಪಿಯ ನಡುವೆ ಬೇರೆ ಯಾವುದೇ ವ್ಯವಹಾರ ಇರುವುದಿಲ್ಲ. ಹಣ ನೀಡುವ ಕಾಲಕ್ಕೆ ನನ್ನ ಮದುವೆ ಇದ್ದು ಆ ಸಮಯದಲ್ಲಿ

ನನ್ನ ಬಳಿ ಹಣ ಇದ್ದು ಸದರಿ ಮದುವೆ ಮುಂದೂಡಿದ ಕಾರಣ ಸದರಿ ಹಣ ನನ್ನ ಬಳಿ ಇತ್ತು. ಸದರಿ ಹಣ ನನ್ನ ಸಂಬಳದಿಂದ ಬಂದ ಹಣವನ್ನು ಉಳಿತಾಯ ಮಾಡಿದ ಹಣವಾಗಿತ್ತು.

4. ನಾನು ನಾಗಮಂಗಲ ಯೂನಿಯನ್ ಬ್ಯಾಂಕ್ ನಲ್ಲಿ ಖಾತೆಯನ್ನು ಹೊಂದಿರುತ್ತೇನೆ. ಸದರಿ ಬ್ಯಾಂಕಿನಲ್ಲಿ ಇರುವ ನನ್ನ ಖಾತಾ ನಕಲನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಬ್ಯಾಂಕಿನಲ್ಲಿ ಯಾವುದೇ ವ್ಯವಹಾರ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು)

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನಾಗಮಂಗಲ.